**PW**-1

(ಇಂದು ದಿನಾಂಕಃ 05-08-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಆರೋಪಿ ಪರ ಶ್ರೀ ಎಂ.ಡಿ.ಆರ್ ವಕೀಲರಿಂದಃ**

ಸಂತೆಗುಳಿಯ ಬಸ್ತಿಕೇರಿಯಲ್ಲಿ ನನ್ನ ವಾಸ್ತವ್ಯದ ಮನೆ ಇರುತ್ತದೆ. ನನ್ನ ತಂದೆಯವರು ಕುಮಟಾ ತಾಲೂಕಿನ ಪೈರುಗದ್ದೆಯಲ್ಲಿರುವ ವಾಸ್ತವ್ಯ ಇರುತ್ತಾರೆ. ನನ್ನ ತಂದೆಯವರು ಪೈರುಗದ್ದೆಯಲ್ಲಿರುವ ವಾಸ್ತವ್ಯ ಮನೆಯಲ್ಲಿ ವಾಸ್ತವ್ಯವಿದ್ದು ಅದೇ ಮನೆಯಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ನಾನು ಹಾಗೂ ನನ್ನ ತಾಯಿ ನನ್ನ ತಂದೆಯವರ ಜೊತೆ ವಾಸ್ತವ್ಯ ಮಾಡಿಕೊಂಡು ಬರುತ್ತಿದ್ದೆವು ಎಂದರೆ ಸರಿ. ನನ್ನ ತಂದೆಯವರು ನಿಧಾನರಾಗಿ 8 ವರ್ಷಗಳು ಆಗಿರುತ್ತದೆ. ನನ್ನ ತಂದೆಯವರು ಕಾಟನ್ ಬೆಡ್ ತಯಾರಿಸಿ ಅದನ್ನು ಮಾರಾಟ ಮಾಡುವ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಮರಣ ನಂತರ ನಮ್ಮ ಕುಟುಂಬದಲ್ಲಿ ಆದ ವ್ಯವಸ್ಥೆಯಂತೆ ನನ್ನ ತಂದೆ ನಡೆಸಿಕೊಂಡು ಹೋಗುತ್ತಿದ್ದ ಅಂಗಡಿಯನ್ನು ನಾನು ಮುಂದುವರಿಸಿಕೊಂಡು ಹೋಗಿರುತ್ತೇನೆ ಎಂದರೆ ಸರಿ. ನಾನು ಸದರಿ ಅಂಗಡಿಯ ಮಾಲೀಕರಾಗಿರುತ್ತೇನೆ ಎಂದರೆ ಸರಿ. ಅಘನಾಶಿನಿ ರಸ್ತೆಯ ಸತ್ಯನಾರಾಯಣ ಬಟ್ಟೆ ಅಂಗಡಿಯ ಎದುರುಗಡೆ ನನ್ನ ಅಂಗಡಿ ಇರುತ್ತದೆ ಎಂದರೆ ಸರಿ. ನನ್ನ ಅಂಗಡಿಯು ಬೆಳಿಗ್ಗೆ 09-00 ಗಂಟೆಯಿಂದ ರಾತ್ರಿ 08-30 ತೆರೆದು ಇರುತ್ತದೆ. ನನ್ನ ಅಂಗಡಿಯ ವ್ಯವಹಾರವನ್ನು ಅಧಿಕೃತ ಕಾನೂನು ಬದ್ಧವಾಗಿ ಮಾಡುತ್ತೇನೆ ಎಂದರೆ ಸರಿ. ನನ್ನ ಆದಾಯ ಸಾಲ ಹಾಗೂ ಖರ್ಚು ವೆಚ್ಚಗಳ ಬಗ್ಗೆ ಬ್ಯಾಂಕಿನಲ್ಲಿ ದಾಖಲಾತಿ ಇರುತ್ತದೆ ಎಂದರೆ ಸರಿ. ನನ್ನ ಆದಾಯಕ್ಕೆ ಸಂಬಂಧಿಸಿದಂತೆ ನಾನು ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ ಎಂದರೆ ಸರಿ. ನಾನು ಪ್ರತಿ ವರ್ಷ ಬ್ಯಾಂಕ್ ಖಾತೆಯ ಮಾಹಿತಿಯನ್ನು ಆದಾಯ ತೆರಿಗೆ ಪಾವತಿ ಅಧಿಕಾರಿಗಳಿಗೆ ನೀಡಿರುತ್ತೇನೆ ಎಂದರೆ ಸರಿ. ನನ್ನ ವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲಾ ಲೆಕ್ಕಚಾರಗಳನ್ನು ದಾಖಲಾತಿಗಳ ರೂಪದಲ್ಲಿ ಇಟ್ಟಿರುತ್ತೇನೆ ಎಂದರೆ ಸರಿ. ನನಗೆ ಸಂಬಂಧಪಟ್ಟ ನಾಲ್ಕು ಬ್ಯಾಂಕ್ ಖಾತೆಗಳು ಇರುತ್ತದೆ. ನನಗೆ ಸಂಬಂಧಪಟ್ಟ ಕೆನರಾ ಬ್ಯಾಂಕ್ ಕುಮಟಾ ಶಾಖೆಯಲ್ಲಿ 2 ಖಾತೆಗಳು, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಸಂತೆಗುಳಿ ಶಾಖೆಯಲ್ಲಿ 2 ಖಾತೆಗಳು, ತಾಮೀರ್ ಕೋ ಆಪರೇಟಿವ್ ಸೊಸೈಟಿ ಕುಮಟಾ ಶಾಖೆಯಲ್ಲಿ 2 ಖಾತೆಗಳು ಇರುತ್ತದೆ. ಕೆನರಾ ಬ್ಯಾಂಕ್, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ತಾಮೀರ್

ಕೋ ಆಪರೇಟಿವ್ ಸೊಸ್ಟೆಟಿಯಲ್ಲಿ ನನಗೆ ಸಂಬಂಧಪಟ್ಟ ತಲಾ ಒಂದು ಉಳಿತಾಯ ಖಾತೆ ಇದ್ದು, ಇನ್ನೊಂದು ತಲಾ ಓ.ಡಿ ಖಾತೆ ಇರುತ್ತದೆ. ನನ್ನ ಕೆನರಾ ಬ್ಯಾಂಕಿನ ಉಳಿತಾಯ ಖಾತೆ ಸಂಖ್ಯೆಃ0400101010029 ಆಗಿದ್ದು, ಓ.ಡಿ ಖಾತೆ ಸಂಖ್ಯೆಃ0400261000579 ಆಗಿರುತ್ತದೆ. ನನ್ನ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯಲ್ಲಿರುವ ಉಳಿತಾಯ ಖಾತೆ ಸಂಖ್ಯೆ ಹಾಗೂ ಓ.ಡಿ ಖಾತೆ ಸಂಖ್ಯೆ ನೆನಪಿಲ್ಲ. ನಾನು ಕೆನರಾ ಬ್ಯಾಂಕಿನ ಖಾತೆಯ ಮಾಹಿತಿಯನ್ನು ಮಾತ್ರ ಆದಾಯ ತೆರಿಗೆ ಇಲಾಖೆಗೆ ನೀಡಿರುತ್ತೇವೆ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯಲ್ಲಿ ನಾನು ವ್ಯವಹಾರ ನಡೆಸುತ್ತಿರುವ ಖಾತೆಗಳು ಇರುತ್ತವೆ. ನನಗೆ ಬ್ಯಾಂಕಿನವರು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಯವರಿಗೆ ನೀಡಬೇಕೆಂದು ತಿಳಿಸದೇ ಇರುವುದರಿಂದ ನಾನು ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಯವರಿಗೆ ನೀಡಿದ್ದು ಇರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿಯನ್ನು ಆದಾಯ ತೆರಿಗೆ ವೆಬ್ ಸೈಟ್ ಹೋಗಿ Tax Consultant ಮುಖಾಂತರ ಸಲ್ಲಿಸುತ್ತೇನೆ. ನನ್ನ Tax Consultant ಸುಧೀಂದ್ರ ಭಟ್. ಸುಧೀಂದ್ರ ಭಟ್ ರವರ ಕಚೇರಿ ಕುಮಟಾದಲ್ಲಿ ಇರುತ್ತದೆ. ನನ್ನ Tax Consultant ತಿಳಿಸಿದ ಎಲ್ಲಾ ದಾಖಲಾತಿಗಳನ್ನು ನಾನು ಅವರಿಗೆ ಒದಗಿಸಿರುತ್ತೇನೆ ಎಂದರೆ ಸರಿ. ನಾನು Tax Consultantಗೆ ನನ್ನ ಸಂಬಂಧಪಟ್ಟ ರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯಲ್ಲಿ ಖಾತೆ ಇರುವ ಬಗ್ಗೆ ಮಾಹಿತಿ ನೀಡಿದ್ದು ಇರುವುದಿಲ್ಲ. Tax Consultant ಸುಧೀಂದ್ರ ಭಟ್‌ರವರು ನನಗೆ ಸಂಬಂಧಟಪ್ಟ ಎಲ್ಲಾ ಬ್ಯಾಂಕನ ಖಾತೆಯ ವಿವರ ಒದಗಿಸಬೇಕೆಂದು ತಿಳಿಸಿದ್ದು ಇರುವುದಿಲ್ಲ. ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯಲ್ಲಿ ನನ್ನ ಉಳಿತಾಯ ಖಾತೆಯಲ್ಲಿ ರೂ.2,000/- ಹಾಗೂ ಓ.ಡಿ ಖಾತೆಯಲ್ಲಿ ರೂ.3,00,000/- ವರೆಗೆ ಮಿತಿ ಇರುತ್ತದೆ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಲ್ಲಿ ನನ್ನ ಉಳಿತಾಯ ಖಾತೆಯಲ್ಲಿ ರೂ.2,000/- ಹಾಗೂ ಓ.ಡಿ ಖಾತೆಯಲ್ಲಿ ರೂ.2,00,000/- ವರೆಗೆ ಮಿತಿ ಇರುತ್ತದೆ. ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯಲ್ಲಿರುವ ನನ್ನ ಓ.ಡಿ ಖಾತೆಯಿಂದ ರೂ.75,000/- ಹಾಗೂ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಲ್ಲಿರುವ ನನ್ನ ಓ.ಡಿ ಖಾತೆಯಿಂದ ರೂ.1,80,000/- ಗಳನ್ನು ಉಪಯೋಗಿಸಿಕೊಂಡಿರುತ್ತೇನೆ. ಆದಾಯ ತೆರಿಗೆ ಇಲಾಖೆಯವರಿಗೆ ನನ್ನ ವಾರ್ಷಿಕ ಆದಾಯ

ರೂ.6,00,000/-ಗಳನ್ನು ತೋರಿಸಿದ್ದು ಇರುತ್ತದೆ. 2021-2022ರಿಂದ ಆದಾಯ ತೆರಿಗೆ ಇಲಾಖೆಯವರಿಗೆ ನನ್ನ ವಾರ್ಷಿಕ ಆದಾಯವನ್ನು ತೋರಿಸಿದ್ದು ಇರುತ್ತದೆ. 2021-2022 ರಿಂದ 2024-2025ರವರೆಗೆ ನನ್ನ ವಾರ್ಷಿಕ ಆದಾಯವನ್ನು ಸ್ವಲ್ಪ ಹೆಚ್ಚು ಕಮ್ಮಿ ರೂ.5,00,000/-ದಿಂದ ರೂ.6,00,000/- ಒಳಗಡೆ ತೋರಿಸಿದ್ದು ಇರುತ್ತದೆ. 2021-2022 ಸಾಲಿನಲ್ಲಿ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯಲ್ಲಿರುವ ಉಳಿತಾಯ ಹಾಗೂ ಓ.ಡಿ ಖಾತೆಯ ಪಾಸ್ ಪುಸ್ತಕಗಳು ನನ್ನ ಬಳಿ ಇರುತ್ತವೆ ಎಂದರೆ ಸರಿ. ಸದರಿ ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿ ಸಾಲ ಪಡೆದುಕೊಂಡ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸದರಿ ಪಾಸ್ ಪುಸ್ತಕಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ, ಸಾಕ್ಷಿ ಮುಂದವರಿದು ತಾಮೀರ್ ಕೋ ಆಪರೇಟಿವ್ ಸೊಸ್ಟೆಟಿಯಲ್ಲಿ ಪ್ರತಿ ವರ್ಷವೂ ಪಾಸ್ ಪುಸ್ತಕ ಬದಲಾವಣೆ ಆಗುತ್ತದೆ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ